**ಓ.ಎಸ್ ನಂ. 32 /2022** **ಡಿ.ಡಬ್ಲ್ಯೂ-3 (ನಾಗರಾಜಪ್ಪ)**

**ಸಾಕ್ಷಿಯನ್ನು ದಿನಾಂಕಃ 20.02.2026 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**<u>ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಕೆ.ಹೆಚ್.ಎಸ್ ವಕೀಲರಿಂದಃ</u>**

1. ನಾನು 4 ನೇ ತರಗತಿಯ ವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡದಲ್ಲಿ ಓದಲು ಬರೆಯಲು ಪೂರ್ತಿಯಾಗಿ ಬರುವುದಿಲ್ಲ, ಸ್ವಲ್ಪ ಸ್ವಲ್ಪ ಬರುತ್ತದೆ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಪ್ರಸ್ತುತ ದಾವೆಯಲ್ಲಿ ನನಗೆ ಎಲ್ಲಾ ಮಾಹಿತಿ ಇರುತ್ತದೆ. ಈ ದಿನ ನ್ಯಾಯಾಲಯಕ್ಕೆ ನಾನು ಮತ್ತು 1 ನೇ ಪ್ರತಿವಾದಿ ಗುರುಮಲ್ಲಪ್ಪ ರವರ ಮಗನ ಜೊತೆಯಲ್ಲಿ ಬಂದಿರುತ್ತೇನೆ ಎಂದರೆ ಸರಿ. ನಾನು ಮತ್ತು 1 ನೇ ಪ್ರತಿವಾದಿ ರವರು ಅನ್ಯೋನ್ಯವಾಗಿರುತ್ತೇವೆ ಎಂದರೆ ಸರಿ, ಅವರು ಬಿದರಹಳ್ಳಿಯಲ್ಲಿ ವಾಸವಾಗಿರುತ್ತಾರೆ ನಾನು ಚೌಡಹಳ್ಳಿಯಲ್ಲಿ ವಾಸವಾಗಿರುತ್ತೇನೆ ಎಂದು ನುಡಿಯುತ್ತಾರೆ. ವಾದಿ ಬಸಪ್ಪ ರವರ ಜೊತೆಯಲ್ಲಿ ನನಗೆ ಹೊಂದಾಣಿಕೆ ಇರುವುದಿಲ್ಲ ಎಂದರೆ ಸರಿ.

2. ನಮ್ಮ ತಾಯಿ ನಾಗಮ್ಮನವರಿಗೆ ದಾವಾಸ್ತಿಗಳಲ್ಲಿ ಯಾವುದೇ ಭಾಗ ಬಂದಿರುವುದಿಲ್ಲ ಎಂದರೆ ಸರಿ. ದಾವಾಸ್ತಿಯ ಬಗ್ಗೆ ನನಗೆ ತಿಳಿದಿರುತ್ತದೆ, ದಾವಾಸ್ತಿಯ ಸಂಖ್ಯೆ 1 ರಿಂದ 3 ರ ಸ. ನಂ. ತಿಳಿದಿರುತ್ತದೆ, ದಾವಾ ಐಟಂ ನಂಬರ್ 4 ರ ಆಸ್ತಿ ನಮಗೆ ಸೇರಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ದಾಖಲಾತಿಗಳನ್ನು ನಾನೇ ತೆಗೆಸಿರುತ್ತೇನೆ. ನಾನು ದಾಖಲಾತಿಗಳನ್ನು ತಾಲ್ಲೂಕು ಕಛೇರಿಯಿಂದ ತೆಗೆಸಿರುತ್ತೇನೆ.

3. ದಾವಾಸ್ತಿಗಳು ಯಾರಿಂದ ಮತ್ತು ಹೇಗೆ ಬಂದಿರುತ್ತವೆ ಎಂದು ನನಗೆ ತಿಳಿದಿರುತ್ತದೆ. ದಾವಾಸ್ತಿಗಳು ಮೂಲ ನಮ್ಮ ತಾತ ಬೋಗಪ್ಪ ರವರಿಗೆ ಸೇರಿತ್ತು,

ಮುಂದುವರಿದು ದಾವಾಸ್ತಿಯಲ್ಲಿ 1 ರಿಂದ 3 ಆಸ್ತಿಗಳು ಮಾತ್ರ ನಮ್ಮ ತಾತನವರಿಗೆ ಸೇರಿತ್ತು ಎಂದು ನುಡಿಯುತ್ತಾರೆ. ದಾವಾ ಐಟಂ 1 ರಿಂದ 3 ರ ಆಸ್ತಿಗಳು ಪಿತ್ರಾರ್ಜಿತ ಒಟ್ಟು ಕುಟುಂಬದ ಆಸ್ತಿಗಳು ಆಗಿರುತ್ತವೆ, 1 ಆಸ್ತಿಯು ಗುರುಮಲ್ಲಪ್ಪ ನವರ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಈಗೆ ಹೇಳಿದಂತೆ ದಾವಾಸ್ತಿ 1 ರಿಂದ 3 ಸ್ವತ್ತುಗಳು ಪಿತ್ರಾರ್ಜಿತ ಆಸ್ತಿಗಳು 4 ನೇ ಸ್ವತ್ತು ಗುರುಮಲ್ಲಪ್ಪನವರ ಸ್ವಯಾರ್ಜಿತ ಆಸ್ತಿ ಎಂದು ಹೇಳಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ವಾದಿ ರವರ ಪ್ರಸ್ತುತ ದಾವೆಯನ್ನು ಸಲ್ಲಿಸಿರುವ ಬಗ್ಗೆ ಬಿದರಹಳ್ಳಿ ಇದ್ದವರು ನನಗೆ ತಿಳಿಸಿದ್ದರಿಂದ ನನಗೆ ತಿಳಿದು ಬಂದಿರುತ್ತದೆ. ಸದರಿ ವಿಷಯವನ್ನು 2 ಅಥವಾ 3 ವರ್ಷದ ಹಿಂದೆ ತಿಳಿಸಿರುತ್ತಾರೆ. ವಾದಿ ಬಸಪ್ಪ ನವರು ಗುರುಮಲ್ಲಪ್ಪನವರ ವಿರುದ್ಧ ದಾವೆಯನ್ನು ತಂದಿರುವ ಬಗ್ಗೆ ನನಗೆ ಮೊದಲೇ ತಿಳಿದಿತ್ತು ನಂತರದಲ್ಲಿ ಗುರುಮಲ್ಲಪ್ಪ ನವರು ತಿಳಿಸಿದ್ದರಿಂದ ನಾನು ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸರಿ. ನಾವು ಮತ್ತು ಗುರುಮಲ್ಲಪ್ಪನವರು ಶಾಮಿಲಾಗಿ ವಾದಿ ಬಸಪ್ಪ ನವರಿಗೆ ಭಾಗ ಕೊಡಬಾರದು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಲಿಖಿತ ಹೇಳಿಕೆಯಲ್ಲಿ ದಾವಾಸ್ತಿಗಳಲ್ಲಿ ನನಗೆ ಹಕ್ಕು ಇರುವ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಲಿಖಿತ ಹೇಳಿಕೆಯಲ್ಲಿ 1 ನೇ ವಾದಿ ಗುರುಮಲ್ಲಪ್ಪನವರಿಗೆ ಮಾತ್ರ ದಾವಾಸ್ತಿಯಲ್ಲಿ ಹಕ್ಕು ಇರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ.

4. ವಾದಿ ಬಸಪ್ಪ ಪ್ರತಿವಾದಿ ಗುರುಮಲ್ಲಪ್ಪ ಮತ್ತು ನಮ್ಮ ತಾಯಿಯವರ ಮಧ್ಯೆ ಭಾಗ ಆಗಿರುವುದಿಲ್ಲ ಎಂದರೆ ಸರಿ. ನನ್ನ ಲಿಖಿತ ಹೇಳಿಕೆಯಲ್ಲಿ ಬಸಪ್ಪ ನವರು ಭಾಗ ತೆಗೆದುಕೊಂಡು ಹೋಗಿರುತ್ತಾರೆ ಎಂದು ಸುಳ್ಳು ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ಬಸಪ್ಪ ನವರು ಅವರ ಭಾಗವನ್ನು ಗುರುಮಲ್ಲಪ್ಪನವರಿಗೆ ಮಾರಾಟ ಮಾಡಿ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಬಸಪ್ಪ ನವರು ಗುರುಮಲ್ಲಪ್ಪನವರಿಗೆ ಮಾರಾಟ ಮಾಡಿರುವುದೂ ಇಲ್ಲ ಮತ್ತು ಆ ರೀತಿಯ ದಾಖಲಾತಿಗಳನ್ನು ನ್ಯಾಯಾಲಯಕ್ಕೆ

ಹಾಜರುಪಡಿಸಿರುದಿಲ್ಲ ಎಂದರೆ ಸಾಕ್ಷಿಯು ನ್ಯಾಯಾಲಯಕ್ಕೆ ಪತ್ರವನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಯಾವುದೇ ಮಾರಾಟ ಮಾಡಿದ ಬಗ್ಗೆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸದೆ ಇದ್ದರೂ ಸಹ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಲಿಖಿತ ಹೇಳಿಕೆಯಲ್ಲಿ ಬಸಪ್ಪನವರ ಅವರ ಭಾಗದ ಜಮೀನನ್ನು ಗುರುಮಲ್ಲಪ್ಪನವರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದು ಹೇಳಿರುವುದು ಸುಳ್ಳಿನಿಂದ ಕೂಡಿರುತ್ತದೆ ಮತ್ತು ಆ ಬಗ್ಗೆ ದಾಖಲಾತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿ ಬಸಪ್ಪ ನವರಿಗೆ ಭಾಗವನ್ನು ಕೊಡಬೇಕಾಗುತ್ತದೆ ಎಂದು ನಾನು ಗುರುಮಲ್ಲಪ್ಪ ಮತ್ತು ಇತರೆ ಪ್ರತಿವಾದಿಗಳ ಜೊತೆ ಸೇರಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ದಾವಾ ಐಟಂ 4 ರ ಸ್ವತ್ತು ವಾದಿ ಮತ್ತು ಪ್ರತಿವಾದಿ ಬಸಪ್ಪನವರು ಒಟ್ಟು ಕುಟುಂಬದಲ್ಲಿ ಇದ್ದಂತಹ ಸಮಯದಲ್ಲಿಯೇ 1960 ರಲ್ಲಿ ಮಂಜೂರು ಆಗಿರುತ್ತದೆ ಎಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿದು ಗುರುಮಲ್ಲಪ್ಪನವರಿಗೆ ಮಾತ್ರ ಮಂಜುರಾಗಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿ ಗುರುಮಲ್ಲಪ್ಪನವರು ಕುಟುಂಬದಲ್ಲಿ ಹಿರಿಯರು ಇದ್ದುದ್ದರಿಂದ ಅವರ ಹೆಸರಿಗೆ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ಐಟಂ 4 ರ ಸ್ವತ್ತು ಸಹ ವಾದಿ ಮತ್ತು ಪ್ರತಿವಾದಿಗಳ ಒಟ್ಟು ಕುಟುಂಬದ ಸ್ವತ್ತಾಗಿದ್ದರೂ ಸಹ ಅದು ಗುರುಮಲ್ಲಪ್ಪನವರಿಗೆ ಸೇರಿರುತ್ತದೆ ಎಂದು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1960 ರ ಪೂರ್ವದಲ್ಲಿ ಮತ್ತು ಇಲ್ಲಿಯವರೆಗೂ ದಾವಾಸ್ತಿಗೆ ಸಂಬಂಧಿಸಿದಂತೆ ವಾದಿ ಬಸಪ್ಪ, ಪ್ರತಿವಾದಿ ಗುರುಮಲ್ಲಪ್ಪ ಮತ್ತು ನಮ್ಮ ನಡುವೆ ಭಾಗ ಆಗಿರುವುದೇ ಇಲ್ಲ ಎಂದರೆ ಸಾಕ್ಷಿಯು ಬಸಪ್ಪ ಮತ್ತು ಗುರುಮಲ್ಲಪ್ಪ ರವರ ಮಧ್ಯೆ ಭಾಗ ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಗುರುಮಲ್ಲಪ್ಪ ಮತ್ತು ಬಸಪ್ಪ ನವರ ಮಧ್ಯೆ ಭಾಗ ಆಗಿರುವುದೂ ಇಲ್ಲ ಮತ್ತು ಯಾವುದೇ ದಾಖಲಾತಿಯು ಇರುವುದಿಲ್ಲ

ಎಂದರೆ ಸಾಕ್ಷಿಯು ದಾಖಲಾತಿಯನ್ನು ಕೊಟ್ಟಿರತ್ತೇನೆ ಎಂದು ನುಡಿಯುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಗುರುಮಲ್ಲಪ್ಪನವರು ಹೇಳುವಂತೆ ಹಾಜರುಪಡಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ